ಊರವರೆದುರು ಕಣ್ತುಂಬಿ ಹೇಳುವಾಗ ಸಣ್ಣಪ್ಪ ಸಾವುಕಾರರ ವಿರೋಧಿ ಪಾರ್ಟಿಯವರ ಹೊಟ್ಟೇಲಿ ಖಾರ ಕಿವುಚ್ದಂಗಾಗುತ್ತಿತ್ತು.

ಇಂತಹ ಬಸಣ್ಣ ಈ ಮೊದಲು ಸೈಕಲ್ ಮೇಲೆ ಊರೂರು ತಿರುಗಿ ಒಡೆದ ತಾಮ್ರದ ಕೊಡಗಳಿಗೆ ಬೆಸುಗೆ ಹಾಕಿ ಕೊಡ ರಿಪೇರಿ ಮಾಡಿಕೊಡುತ್ತಿದ್ದ. ಈಗೀಗ ತಾಮ್ರದ ಕೊಡಗಳ ಬದಲಿಗೆ ಪ್ಲಾಸ್ಟಿಕ್ ಬಿಂದಿಗೆ ಬಂದಿವೆ. ಊರೊಳಗೆ ಕೊಳಾಯಿನೀರು ಬರುತ್ತಿದೆ. ಹಾಗಾಗಿ ಈ ಬಿಜಿನೆಸ್ಸು ನಷ್ಟ ಆಗಿ ಪೇರೂ ಹಣ್ಣು ಮಾರಾಟ ಮಾಡಲು ಶುರು ಮಾಡಿದ್ದ. ಬಂದ ಲಾಭ ನಷ್ಟದ ತೀರ ಲೆಕ್ಕ ಹಾಕದೇ ಮರಾಟವಾಗದೇ ಉಳಿದ ಹಣ್ಣುಗಳನ್ನು ಶಾಲೆಯ ಬಳಿ ಹೋಗಿ ಮಕ್ಕಳಿಗೆ ಹಂಚಿ ಬರುತ್ತಿದ್ದ.

ಬಸಣ್ಣನೆಂದರೆ ಊರಿನ ಆಪ್ತ. ಯಾರದೋ ಮದುವೆ ಮನೆಯಲ್ಲಿ ಪೆಂಡಾಲು ಹಾಕುವುದು, ಊರಿನೊಳಗೆ ನಾಟಕ ನಡೀತಿದ್ರೆ ಇವನ ಕೈಯಾರೆ ಪಾತ್ರದವರಿಗೆ ಊಟ, ಬೀಡಿ, ಬೆಂಕಿಪೊಟ್ಟಣ ಕೊಡಿಸಿ, ನಾಟಕದ ಸೀನರಿಗಳ ಹಗ್ಗನೂ ಎಳೀತಿದ್ದ. ಯಾರ ಸಾವಾದರೂ ಅವರ ಮನೆ ಮುಂದೆ ಹೋಗಿ ಚಟ್ಟ ಕಟ್ಟುವುದರಿಂದ ಹಿಡಿದು ಕಿಚ್ಚು ಹಾಕಿ ಶವದ ತಲೆ ಒಡೆಯುತನಕ ಅಲ್ಲೇ ಇದ್ದು ಖುದ್ದು ಮುತುವರ್ಜಿ ವಹಿಸುತ್ತಿದ್ದ. ಅದರ ಬದಲಿಗೆ ಯಾರ ಬಳಿಯೂ ಒಂದು ರೂಪಾಯಿ ಕೇಳಿದವನಲ್ಲ. ಆದರೆ ಈಗ ಮಗನ ಓದಿಗೆ ದುಡ್ಡು ಬೇಕು.

* * *

ಸಣ್ಣಪ್ಪ ಸಾಹುಕಾರರು ಬಸಣ್ಣನ ಗುಡ್ಡದ ಮಡ್ಡಿ ಹೊಲ ಬರೆಸಿಕೊಂಡು ಒಂದು ಲಕ್ಷ ರೂಪಾಯಿ ನೀಡಿದರು. ಹುಬ್ಬಳ್ಳಿಯ ಕಾಲೇಜಿನ ಅಡ್ಮಿಷನಿಗೆ ಅಷ್ಟು ದುಡ್ಡು ಲಗಮಣ್ಣನ ಕೈಗೆ ಕೊಡುವ ಧೈರ್ಯ ಸಾಲದೇ ಅವನೂ ಹುಬ್ಬಳ್ಳಿಗೆ ಹೊರಡಲು ಅಣಿಯಾದ. ಎರಡು ದಿನಕ್ಕೆ ಸಾಕಾಗುವಷ್ಟು ರೊಟ್ಟಿಪಲ್ಯೆ ಬುತ್ತಿ ಕಟ್ಟಿಕೊಂಡು ನವಿಲ್ಯಾಳ ಕ್ರಾಸಿನ ತನಕ ನಡೆಯುತ್ತಲೇ ಹೋಗಿ ಅಲ್ಲಿಂದ ಅಥಣಿ ಹುಬ್ಬಳ್ಳಿ ಬಸ್ಸು ಹಿಡಿದು ಹುಬ್ಬಳ್ಳಿ ತಲುಪಿದರು.

ಮೊಟ್ಟ ಮೊದಲ ಬಾರಿ ಶಹರಿಗೆ ಬಂದ ಬಸಣ್ಣ ಈ ಕಿಕ್ಕಿರಿದ ಬಸ್ಸು,ಗೌಜು, ಗದ್ದಲ ನೋಡಿ ಕಂಗಾಲಾಗಿ ಮಾತೇ ಹೊರಡದವನಾಗಿದ್ದ.ಅಗಾಗ ತನ್ನ ಮುಂಡಾದ ಜೋಬಿನಲ್ಲಿ ಗಂಟು ಕಟ್ಟಿ ಇಟ್ಟ ಕಿಸೆಯ ರೊಕ್ಕ ಮುಟ್ಟಿ ಮುಟ್ಟಿ ನೋಡಿಕೊಂಡು ದುಡ್ಡಿನ ಖಾತ್ರಿ ಪಡಿಸಿಕೊಳ್ಳುತ್ತಿದ್ದ. ಕಾಲೇಜು ತಲುಪಿ, ಕೌಂಟರಿನಲ್ಲಿ ದುಡ್ಡು ಕಟ್ಟಿ ಹಾಸ್ಟೆಲ್ ನೋಡಿಕೊಂಡು ಬರುವ ಹೊತ್ತಿಗೆ ಸಂಜೆಯಾಗಿತ್ತು. ಈ ಸಮಯದಲ್ಲಿ ಅಥಣಿಗೆ ಯಾವ ಬಸ್ಸೂ ಇರುವುದಿಲ್ಲವೆಂದು ಖಾತ್ರಿ ಪಡಿಸಿಕೊಂಡ ಲಗಮಣ್ಣ ಹಾಸ್ಟೆಲ್ಲಿಗೆ ಬೇಕಾದ ಬಕೆಟ್ಟು, ಮಗ್ಗು, ಚಪ್ಲಿ, ಖರೀದಿಸಿ ರಾತ್ರಿ ಆನಂದ ಹಾಸ್ಟೆಲಿನಲ್ಲಿ ಮಲಗಿ ಬೆಳಿಗ್ಗೆ ಅಥಣಿ ಬಸ್ಸು ಹಿಡಿದು, ಬಸಣ್ಣ ಊರಿಗೆ ಮರಳಿದ. ಮತ್ತೆ ಯಥಾ ಪ್ರಕಾರ ಸೈಕಲ್ ಹತ್ತಿ ಹೊಳೆ ದಾಟಿ ಪೇರೂ ಹಣ್ಣು ಮಾರುವ ಕಾಯಕದಲ್ಲಿ ನಿರತನಾದ.

ಕೋವಿಡ್ ಕಾರಣದಿಂದ ಯಾವ ತರಗತಿಗಳೂ ನಡೆಯದೇ ಇದ್ದುದರಿಂದ ಲಗಮಣ್ಣ ಕ್ಲಾಸಿಗೆ ಹೋಗದೆ ಹಾಸ್ಟೆಲ್ಲಿನಲ್ಲಿಯೇ ಓದುತ್ತಿದ್ದೇನೆಂದು ಬಸಣ್ಣನಿಗೆ ಫೋನು ಮಾಡಿ ದಿನಚರಿ ಒಪ್ಪಿಸುತ್ತಿದ್ದ. ಅಡ್ಮಿಷನ್ ಆಗಿ ಉಳಿದ ದುಡ್ಡಿನಲ್ಲಿ ತಂದೆ ಮಗ ಇಬ್ಬರೂ ಒಂದೊಂದು ನೋಕಿಯ ಕೀ ಪ್ಯಾಡಿನ ಮೊಬೈಲ್ ಕೊಂಡಿದ್ದರು. ಬಸಣ್ಣನ ಕಿಸೆಯಲ್ಲಿಟ್ಟರೆ ಮೊಬೈಲ್ ಕಳೆದು ಹೋಗಬಹುದೆಂಬ ಭಯದಲ್ಲಿ ಜನಾಬಾಯಿ ಹತ್ತಿರವೇ ಇಟ್ಟು ಹೋಗುತ್ತಿದ್ದ. ಮೂರು ತಿಂಗಳೊಳಗೆ ಇನ್ನೆರೆಡು ಲಕ್ಷ ರೂಪಾಯಿ ಕಾಲೇಜಿನ ಕಂತು ಕಟ್ಟಬೇಕಿತ್ತು. ಹೀಗಾಗಿ ಅದಕ್ಕೆ ಏನು ಮಾಡಬೇಕೆಂದು ತೋಚದೆ ಬಸಣ್ಣ ಹಗಲು ರಾತ್ರಿ ಯೋಚನೆಯಲ್ಲೇ ಕಳೆಯುತ್ತಿದ್ದ.

* * *

ಇಷ್ಟೆಲ್ಲಾ ಆಗುವ ಹೊತ್ತಿಗೆ ಊರಿನಲ್ಲಿ ಅನೇಕ ಘಟನೆಗಳು ನಡೆದು ಹೋಗಿದ್ದವು. ಪಂಚಾಯತಿ ಸದಸ್ಯರ ಅವಧಿ ಮುಗಿದಿದೆಯೆಂದು ಪಂಚಾಯತಿಯ ಅಧಿಕಾರವನ್ನು ಸರಕಾರ ಬರಖಾಸ್ತುಗೊಳಿಸಿ ಸಣ್ಣಪ್ಪಗೌಡರು ಅಧಿಕಾರದಿಂದ ಇಳಿದಿದ್ದರು. ಕೋವಿಡ್ ಕಾರಣಕ್ಕೆ ಚುನಾವಣೆ ನಡೆಸಲು ಸರಕಾರಕ್ಕೂ ಧೈರ್ಯವಿರಲಿಲ್ಲ.

ನೋಡ ನೋಡುತ್ತಿದ್ದಂತೆ ಕಾಲೇಜಿನವರ ಮೂರು ತಿಂಗಳ ಅವಧಿ ಮುಗಿದು ಹೋಗಿತ್ತು. ಅತ್ತ ಲಗಮಣ್ಣ ಕೂಡ ಸ್ಕಾಲರ್‌ಶಿಪ್‌ಗಾಗಿ, ಜಾತಿ, ಆದಾಯ, ಸಿಂಧುತ್ವ ಪ್ರಮಾಣ ಪತ್ರಕ್ಕೆ ಓಡಾಡುತ್ತಲೇ ಇದ್ದ. ಆದರೆ, ಒಂದು ಚಿಕ್ಕಾಸು ಕೂಡ ಕೈಗೆ ಹತ್ತಿರಲಿಲ್ಲ.